# ಕಲೆ, ಕೃತಿ, ಚಟುವಟಿಕೆಗಳ ನಡುವಣ ಸೇತುವೆ



ಮರಿಶಾಮಾಚಾರ್

■ ಎಸ್.ಜಿ. ವಾಸುದೇವ್



ಮರಿಶಾಮಾಚಾರರನ್ನು ನಾನು ಮೊದಲು ಭೇಟಿಯಾದದ್ದು 70ರ ದಶಕದಲ್ಲಿ– ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ. ಬರೋಡದಲ್ಲಿ ಕಲೆಯ ಅಧ್ಯಯನ ಮಾಡಲು ಲಲಿತಕಲಾ ಅಕಾಡೆಮಿಯಿಂದ ವಿದ್ಯಾರ್ಥಿ ವೇತನ ಪಡೆದ ಇವರು, ಅಲ್ಲಿ ಖ್ಯಾತ ಕಲಾವಿದ ಕೆ.ಜಿ. ಸುಬ್ರಹ್ಮಣ್ಯನ್ ಬಳಿ ಶಿಷ್ಯವೃತ್ತಿ ಮಾಡುತ್ತ, ಕಲಾಸಂಘಟನಾ ಮನೋಭಾವವನ್ನೂ ಬೆಳೆಸಿಕೊಂಡರು. ಕಲಾವಿದರ, ಕಲಾ ವಿದ್ಯಾರ್ಥಿಗಳ ಹಾಗೂ ಕಲಾ ಪ್ರೇಮಿಗಳ ನಡುವೆ ಸೌಹಾರ್ದವನ್ನು ಉಂಟುಮಾಡುವಲ್ಲಿ ಪ್ರಯತ್ನಿಸಿ ಗೆದ್ದಿರುವುದು ಇವರ ಒಂದು ಮುಖ್ಯ ಸಾಧನೆ.

ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಕೆ.ಕೆ. ಹೆಬ್ಬಾರರು ಅದರ ದೈನಂದಿನ ಕಾರ್ಯ ಚಟುವಟಿಕೆಯ ಸುಸೂತ್ರ ಕಾರ್ಯ ನಿರ್ವಹಣೆಗೆ ಮರಿಶಾಮಾಚಾರರೇ ಸೂಕ್ತವಾದ ವ್ಯಕ್ತಿಯೆಂಬ ಸೂಕ್ತ ನಿರ್ಧಾರವನ್ನು ಸೂಕ್ತ ಕಾಲದಲ್ಲೇ ಕೈಗೊಂಡರು. ಆದ್ದರಿಂದ ಅಕಾಡೆಮಿಯನ್ನು ಸೇರಿದ ಮರಿಯವರು ಸಮಗ್ರ ಕಲಾ ಸಮುದಾಯವನ್ನು ತಲುಪಿ. ಅವರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಪ್ರತಿಯೊಬ್ಬರೊಂದಿಗೂ ವೈಯಕ್ತಿಕ ಪರಿಚಯ ಉಳಿಸಿಕೊಂಡರು.

ಸಹ ಕಲಾವಿದರುಗಳೊಂದಿಗೆ, ಗೆಳೆಯರೊಂದಿಗೆ 'ಸಂಯೋಜಿತ' ಕಲಾ ಸಂಘಟನೆಯನ್ನು ಹುಟ್ಟುಹಾಕುವ ಮೂಲಕ ಅಪರೂಪದ ಪ್ರದರ್ಶನಗಳನ್ನು, ಶಿಷ್ಯವೇತನಗಳನ್ನು ವ್ಯವಸ್ಥೆಗೊಳಿಸಿದ ಮರಿಯವರು, ಸ್ವತಃ ಕಲಾಕೃತಿಗಳನ್ನೂ ರಚಿಸಿದರು. ಇದರೊಂದಿಗೆ ತಮ್ಮದೇ ಛಾಪಿನ ಕಲಾ ಬರವಣಿಗೆಯನ್ನೂ ರೂಢಿಸಿಕೊಂಡು ಅನೇಕ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಅನೇಕ ನಿಯತ-ಕಾಲಿಕೆಗಳು ಹಾಗೂ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಅಕಾಡೆಮಿ ಮತ್ತು ತಮ್ಮದೇ ಪ್ರಕಟಣೆಗಳ ಮೂಲಕ ಕಲಾ ಪ್ರಕಾಶನ ಕಾಯಕವನ್ನೂ ನಿರ್ವಹಿಸಿದರು.

ಹೆಬ್ಬಾರ್, ಕೆ.ಜಿ. ಸುಬ್ರಹ್ಮಣ್ಯನ್ ಮುಂತಾದ ಭಾರತೀಯ ಕಲಾರಂಗದ ಮಹಾನ್ ಕಲಾವಿದರ ಬಗ್ಗೆ ಪುಸ್ತಕಗಳನ್ನು ರಚಿಸಿದ್ದಾರೆ. ಈ ಇಬ್ಬರು ಕಲಾವಿದರ ಪ್ರಭಾವ ಇವರ ಮೇಲೆ ಗಾಢವಾಗಿರುವುದು ಮರಿಯವರು ಕೈಗೊಂಡ ಕಾರ್ಯದಿಂದಲೇ ವಿಧಿತವಾಗಿದೆ. ಇವರು ವಹಿಸಿದ ಪಾತ್ರವನ್ನು ನಿರ್ವಹಿಸುವ ಮತ್ತೊಬ್ಬ ಕಲಾವಿದರು ಇರಲಾರರು. ಇವರ ತಾಳ್ಮೆ ಮತ್ತು ಸಹನೆ ಅಂತಹದ್ದು. ಕರ್ನಾಟಕ ಲಲಿತಕಲಾ ಅಕಾಡೆಮಿಯು ಹೊರ ತರುತ್ತಿರುವ 'ಕಲಾ ವಾರ್ತೆ'ಯ ಸಂಪಾದಕರಾಗಿ ಕೆಲಸ ಮತ್ತು ಕಲಾ ಪುಸ್ತಕಗಳನ್ನು ಕರ್ನಾಟಕ ಮೂಲೆ ಮೂಲೆಗಳಲ್ಲಿನ ಕನ್ನಡದ ಕಲಾ ಶಾಲೆಗಳಿಗೂ ಸ್ಥಳೀಯ ಭಾಷೆಯಲ್ಲಿ ಲೇಖನಗಳನ್ನು ತಲುಪಿಸುವ ಕಾರ್ಯ ಕೈಗೊಂಡವರು ನಮ್ಮ ಮರಿಶಾಮಾಚಾರ್.

(40ನೇ ಪುಟ ನೋಡಿ)

